**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸ್ಪೆಷಲ್ ಮೊಕದ್ದಮೆ ನಂಃ **24/2022**</u>

| | | |
|---|---|---|
| ಸಾಕ್ಷಿದಾರರ ಹೆಸರು | - ವಾಸುದೇವ್ | ಪಿಡಬ್ಲೂ - 09 |
| ತಂದೆಯ ಹೆಸರು | - ರಮೇಶ್ | ಸಿಡಬ್ಲೂ - 15 |
| ವಯಸ್ಸು | - 39 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಕಬ್ಬಿನಹಳ್ಳಿ | |

ದಿನಾಂಕಃ 29.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನಾನು ಈ ಹಿಂದೆ

ನೋಡಿದ್ದೇನೆ. ಆತನ ಹೆಸರು ಮನು, ಆತ ನಮ್ಮ ಎಸ್ಟೇಟಿಗೆ ಕೂಲಿ ಕೆಲಸ ಮಾಡಲು ಬಂದಿದ್ದನು. ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಗೊತ್ತು, ಆತ ಮತ್ತು ಆರೋಪಿ ಒಟ್ಟಿಗೆ ನಮ್ಮ ಎಸ್ಟೇಟಿಗೆ ಕೂಲಿ ಕೆಲಸಕ್ಕೆಂದು ಬಂದಿದ್ದರು. ಫ್ರಾಸಾ.2 ಯಾರೆಂದು ಗೊತ್ತಿರಲಿಲ್ಲ, ನಂತರದಲ್ಲಿ ಅವರು ಮೃತನ ತಂದೆ ಎಂದು ತಿಳಿಯಿತು. ಪಂಚರಾದ ಫ್ರಾಸಾ.1 ಮತ್ತು ಫ್ರಾಸಾ.5 ಗೊತ್ತು. ಫ್ರಾಸಾ.8 ನನ್ನ ತಂದೆ. ಚಾಸಾ.16 ಗೊತ್ತು, ಅವರು ನಮ್ಮ ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದಾರೆ.

2. ಕಬ್ಬಿನಹಳ್ಳಿ ಗ್ರಾಮದಲ್ಲಿ ನನಗೆ ಮತ್ತು ನನ್ನ ತಂದೆಗೆ ಸೇರಿದ ಒಟ್ಟು 24 ಎಕರೆ ಜಮೀನು ಇದೆ. ಸರ್ವೆ ನಂಬರು 212/2 ರಲ್ಲಿ ಸುಮಾರು 2 ಎಕರೆಯಲ್ಲಿ ನಮಗೆ ಸೇರಿದ ಕಾಫಿ ಎಸ್ಟೇಟ್ ಇದೆ. ಸದರಿ ಎಸ್ಟೇಟಿನಲ್ಲಿ ಕೂಲಿ ಕಾರ್ಮಿಕರು ಉಳಿದುಕೊಳ್ಳಲೆಂದು ಕೂಲಿ ಲೈನ್ ಮನೆಗಳಿವೆ. ಸದರಿ ಎಸ್ಟೇಟಿನಲ್ಲಿಯೇ ನಮ್ಮ ವಾಸದ ಮನೆ ಸಹ ಇದೆ. ಸದರಿ ಮನೆಯಲ್ಲಿ ನಾನು ನನ್ನ ತಂದೆತಾಯಿ ಮತ್ತು ನನ್ನ ಕುಟುಂಬದೊಂದಿಗೆ ವಾಸವಾಗಿದ್ದೇನೆ. ನಮ್ಮ ಮನೆಯಿಂದ ಮೇಲ್ಭಾಗದಲ್ಲಿ ಸುಮಾರು 4 ರಿಂದ 5 ಕೂಲಿ ಲೈನ್ ಮನೆಗಳಿವೆ ಮತ್ತು ಕೆಳಭಾಗದಲ್ಲಿ 3 ಕೂಲಿ ಲೈನ್ ಮನೆಗಳಿವೆ.

3. 2021 ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಘಟನೆಯ ಎರಡು ವಾರಗಳ ಹಿಂದೆ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿರವರು ಒಟ್ಟಿಗೆ ನಮ್ಮ ಎಸ್ಟೇಟಿಗೆ ಕೂಲಿ ಕೆಲಸಕ್ಕೆ

ಬಂದಿದ್ದರು. ಅವರಿಗೆ ನಾವು ಕೆಲಸವನ್ನು ಕೊಟ್ಟಿದ್ದೆವು ಮತ್ತು ನಮ್ಮ ಮನೆಯಿಂದ ಕೆಳಭಾಗದಲ್ಲಿರುವ ಕೂಲಿ ಲೈನಿನ ಮೊದಲನೆ ಮನೆಯನ್ನು ಅವರಿಗೆ ಉಳಿದುಕೊಳ್ಳಲು ಕೊಟ್ಟಿದ್ದೆವು. ಅದರಂತೆ ಆರೋಪಿ ಮತ್ತು ಮೃತ ಶೇಷಪ್ಪ ಸದರಿ ಮನೆಯಲ್ಲೇ ಒಟ್ಟಿಗೆ ಉಳಿದುಕೊಂಡಿದ್ದರು. ಅದರಲ್ಲಿ ಎರಡು ರೂಮುಗಳು ಇದ್ದವು. ನಮ್ಮ ಎಸ್ಟೇಟಿನಲ್ಲಿ ಕೆಲಸಕ್ಕೆ ಇರುವವರೆಲ್ಲರೂ ತಾತ್ಕಾಲಿಕ ಕೆಲಸಗಾರರು. ಅದೇ ರೀತಿ ಆರೋಪಿ ಮತ್ತು ಮೃತ ಶೇಷಪ್ಪರವರು ಸಹ ತಾತ್ಕಾಲಿಕ ಕೆಲಸಗಾರರು ಆಗಿದ್ದರು. ನಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡುವ ಎಲ್ಲಾ ಕೆಲಸಗಾರರ ಹಾಜರಾತಿಯನ್ನು ನಿರ್ವಹಿಸುತ್ತೇವೆ. ಅದನ್ನು ನಮ್ಮ ಎಸ್ಟೇಟಿನ ಮ್ಯಾನೇಜರ್ ಮತ್ತು ರೈಟರ್ ಆದ ಚಾಸಾ.16 ಚೇತನ್ ರವರು ನಿರ್ವಹಿಸುತ್ತಾರೆ. ಸದರಿ ಹಾಜರಾತಿ ವಹಿಯಲ್ಲಿ ಆರೋಪಿ ಮತ್ತು ಮೃತನ ಹೆಸರನ್ನು ಸೇರಿಸಲಾಗಿತ್ತು.

4. ಪ್ರತಿ ಬುಧವಾರದಂದು ಎಸ್ಟೇಟಿನ ಕೂಲಿ ಕೆಲಸಗಾರರಿಗೆ ಬಟವಾಡೆಯನ್ನು ಮಾಡಲಾಗುತ್ತದೆ. ದಿಃ 17-11-2021 ರಂದು ಆರೋಪಿ ಮತ್ತು ಮೃತನಿಗೆ ಕೊನೆಯ ಬಾರಿಗೆ ಬಟವಾಡೆಯನ್ನು ಮಾಡಲಾಗಿತ್ತು. ನನ್ನ ತಂದೆಯಾದ ಪ್ರಾಸಾ.8 ರವರು ಆ ದಿನ ಬಟವಾಡೆ ಮಾಡಿ ಹಣವನ್ನು ಆರೋಪಿ ಮತ್ತು ಮೃತನಿಗೆ ಕೊಟ್ಟಿದ್ದರು. ಬಟವಾಡೆಯಾದ ಬಳಿಕ ಅವರಿಬ್ಬರು ಸಂತೆಗೆ ಹೋದರು. ನಾನು ಮತ್ತು ಪ್ರಾಸಾ.8 ರವರು ಮನೆಯಲ್ಲಿಯೇ ಇದ್ದೆವು.

5. ಮಾರನೆ ದಿನ ಅಂದರೆ ದಿಃ 18-11-2021 ರಂದು ಬೆಳಿಗ್ಗೆ ಆರೋಪಿ ಮತ್ತು ಮೃತ ಕೆಲಸಕ್ಕೆ ಬಂದಿಲ್ಲವೆಂದು ಚಾಸಾ.16 ರವರು ನನಗೆ ತಿಳಿಸಿದರು. ಸಂಜೆಯವರೆಗೂ ಅವರು ಕೆಲಸಕ್ಕೆ ಬಾರದಿದ್ದಾಗ ಏನಾಗಿದೆ ಎಂದು ಹೋಗಿ ನೋಡಿಕೊಂಡು ಬನ್ನಿ ಎಂದು ನಾನು ಚಾಸಾ.16 ರವರನ್ನು ಅವರು ಉಳಿದುಕೊಂಡಿದ್ದ ಕೂಲಿಲೈನ್ ಮನೆಗೆ ಕಳುಹಿಸಿದೆನು. ಅದರಂತೆ ಚಾಸಾ.16 ರವರು ಆರೋಪಿ ಮತ್ತು ಶೇಷಪ್ಪ ಉಳಿದುಕೊಂಡಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋಗಿ ನೋಡಿದಾಗ ಮನೆಯ ಬಾಗಿಲು ಹಾಕಿದ್ದರಿಂದ ಕಿಟಕಿಯಿಂದ ನೋಡಿದಾಗ ಅಲ್ಲಿ ಯಾರೋ ಹೊದಿಕೆಯನ್ನು ಹೊದ್ದುಕೊಂಡು ಮಲಗಿದಂತೆ ಕಾಣುತ್ತಿದೆ, ಗೋಡೆ ಮತ್ತು ನೆಲದ ಮೇಲೆ ರಕ್ತ ಹರಿದಿರುವುದು ಕಂಡುಬಂತು ಎಂದು ಚಾಸಾ.16 ರವರು ನನಗೆ ತಿಳಿಸಿದರು.

6. ನಂತರ ನಾನು ಆರೋಪಿ ಮತ್ತು ಮೃತ ಶೇಷಪ್ಪ ಉಳಿದುಕೊಂಡಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋದೆನು. ನನ್ನ ಹಿಂದೆ ಫ್ರಾಸಾ.8 ರವರು ಸಹ ಅಲ್ಲಿಗೆ ಬಂದರು. ಆ ಸಮಯದಲ್ಲಿ ಸ್ವಲ್ಪ ಕತ್ತಲೆ ಇದ್ದ ಕಾರಣ ನಾವು ಮೊಬೈಲ್ ಟಾರ್ಚನ್ನು ಆನ್ ಮಾಡಿಕೊಂಡು ಕಿಟಕಿಯಿಂದ ನೋಡಿದಾಗ ಯಾರೋ ಸತ್ತಿರುವಂತೆ ಕಂಡುಬಂತು, ಅವರ ಮೇಲೆ ರಗ್ಗನ್ನು ಮುಚ್ಚಿರುವುದು, ಗೋಡೆ ಮತ್ತು ನೆಲದ ಮೇಲೆ ರಕ್ತ ಇರುವುದು ಕಂಡುಬಂತು. ನಂತರ ನಾನು ಕೂಡಲೇ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದೆನು.

7. ನಂತರ ಸಂಜೆ ಸುಮಾರು 7 ರಿಂದ 7.30 ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದು ಆರೋಪಿ ಮತ್ತು ಶೇಷಪ್ಪ ವಾಸವಾಗಿದ್ದ ಮನೆಯ ಬಾಗಿಲನ್ನು ತೆಗೆದರು. ನಂತರ ಪೊಲೀಸರು ಮತ್ತು ನಾವು ಮನೆಯ ಒಳಗೆ ಹೋದೆವು. ಮನೆಯ ಮೊದಲನೆಯ ರೂಮಿನಲ್ಲಿದ್ದ ವ್ಯಕ್ತಿಯ ಮೇಲೆ ಇದ್ದ ಹೊದಿಕೆಯನ್ನು ಪೊಲೀಸರು ತೆಗೆದಾಗ ಆತ ಶೇಷಪ್ಪ ಎಂದು ತಿಳಿಯಿತು, ಆತ ಮೃತಪಟ್ಟಿರುವುದು ಕಂಡುಬಂತು. ಆ ಸಮಯದಲ್ಲಿ ಆರೋಪಿ ಅಲ್ಲಿ ಇರಲಿಲ್ಲ. ಶೇಷಪ್ಪನ ಶವದ ಮೇಲೆ ಸುಮಾರು ಕಡೆ ಕತ್ತಿಯಿಂದ ಚುಚ್ಚಿರುವುದು ಮತ್ತು ಕೊಚ್ಚಿರುವುದು ಕಂಡುಬಂತು.

8. ಪೊಲೀಸರು ಶೇಷಪ್ಪನ ಪ್ಯಾಂಟಿನ ಜೇಬಿನಲ್ಲಿದ್ದ ಒಂದು ಆಧಾರ ಕಾರ್ಡ ಮತ್ತು ಚೀಟಿಗಳನ್ನು ತೆಗೆದು ನೋಡಿದರು. ಒಂದು ಚೀಟಿಯಲ್ಲಿದ್ದ ಶೇಷಪ್ಪನ ತಂದೆಯ ಮೊಬೈಲ್ ನಂಬರನ್ನು ಪೊಲೀಸರು ತೆಗೆದುಕೊಟ್ಟರು. ನಾನು ಸದರಿ ನಂಬರಿಗೆ ಕರೆ ಮಾಡಿ ಮಾಹಿತಿಯನ್ನು ಕೊಟ್ಟೆನು. ಆಗ ಅವರು ಹಾನಬಾಳ್‌ನ ಒಂದು ತೋಟದಲ್ಲಿ ಕೆಲಸಕ್ಕೆ ಇರುವುದಾಗಿ ತಿಳಿಸಿ ಈಗ ಬಸ್ ಸಿಗುವುದಿಲ್ಲ ಬೆಳಿಗ್ಗೆ ಬರುತ್ತೇನೆ ಎಂದು ತಿಳಿಸಿದರು. ನಂತರ ಪೊಲೀಸರು ಶೇಷಪ್ಪನ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದರು.

9. ಹಿಂದಿನ ದಿನ ಅಂದರೆ ಬಟವಾಡೆ ಮಾಡಿದ ದಿನ ಅಂದರೆ ದಿಃ 17-11-2021 ರಂದು ಆರೋಪಿ ಮತ್ತು ಶೇಷಪ್ಪ ಅಲಿಯಾಸ್ ಶಶಿಕುಮಾರ ಮದ್ಯಪಾನ ಮಾಡಿ ಗಲಾಟೆ

ಮಾಡಿಕೊಳ್ಳುತ್ತಿದ್ದಾಗಿ, ಅದನ್ನು ನೋಡಿದ ಚಾಸಾ.16 ರವರು ನೀವು ಹೀಗೆ ಗಲಾಟೆ ಮಾಡಿಕೊಳ್ಳುತ್ತಿದ್ದರೆ ನಾನು ಅದನ್ನು ಮಾಲೀಕರಿಗೆ ಅಂದರೆ ನಮಗೆ ತಿಳಿಸುವುದಾಗಿ ಅವರಿಗೆ ಹೇಳಿ ವಾರ್ನಿಂಗ್ ಕೊಟ್ಟಿದ್ದಾಗಿ ಚಾಸಾ.16 ರವರು ನನಗೆ ಆ ದಿನ ಸಂಜೆ ತಿಳಿಸಿದ್ದರು. ಅದೇ ದಿನ ಅಂದರೆ ದಿಃ 17-11-2021 ರಂದು ಸಂಜೆ ಸುಮಾರು 5 ಗಂಟೆ ಸುಮಾರಿಗೆ ಆರೋಪಿ ಮನು ನಮ್ಮ ಮನೆಗೆ ಬಂದು, ನಮ್ಮ ಅತ್ತೆ ಬಂದಿದ್ದಾರೆ, ಅವರನ್ನು ವಾಪಸ್ ಕಳುಹಿಸಬೇಕು ಎಂದು ಹೇಳಿ ನಮ್ಮ ತಂದೆಯಿಂದ ರೂ.500/- ಪಡೆದುಕೊಂಡು ಹೋಗಿದ್ದಾಗಿ ನನ್ನ ತಂದೆ ನನಗೆ ತಿಳಿಸಿದ್ದರು.

10. ಮಾರನೆ ದಿನ ಅಂದರೆ ದಿಃ 19-11-2021 ರಂದು ಬೆಳಿಗ್ಗೆ 9 ಗಂಟೆಗೆ ಪೊಲೀಸರು ಶೇಷಪ್ಪನ ಕೊಲೆಯಾಗಿದ್ದ ಸ್ಥಳಕ್ಕೆ ಮಹಜರ್ ಮಾಡಲು ಬಂದಿದ್ದರು. ಆ ಸಮಯದಲ್ಲಿ ನಾನು, ಚಾಸಾ.16 ಇದ್ದೆವು. ಸಾಕ್ಷಿದಾರರಾಗಿ ಫ್ರಾಸಾ.1 ಮತ್ತು ಫ್ರಾಸಾ.5 ರವರನ್ನು ಪೊಲೀಸರು ಕರೆಸಿದ್ದರು. ಅವರ ಸಮಕ್ಷಮ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆನು. ಆರೋಪಿ ಮತ್ತು ಶೇಷಪ್ಪ ವಾಸವಾಗಿದ್ದ ಕೂಲಿ ಲೈನ್ ಮನೆಯ ಅಡುಗೆ ಮನೆಯ ಗೋಡೆಯ ಮೇಲೆ ರಕ್ತದ ಕಲೆಗಳು ಇದ್ದವು, ಅದನ್ನು ಪೊಲೀಸರು ಸಂಗ್ರಹಿಸಿದರು. ನಂತರ ಮೃತ ದೇಹ ಇದ್ದ ಸ್ಥಳದ ನೆಲದ ಮೇಲೆ ಮತ್ತು ಗೋಡೆಯ ಮೇಲೆ ರಕ್ತದ ಕಲೆಗಳು ಇದ್ದವು, ಅವುಗಳನ್ನು ಪೊಲೀಸರು ಪ್ರತ್ಯೇಕವಾಗಿ ಸಂಗ್ರಹಿಸಿದರು. ಗೋಡೆಯ ಮೇಲೆ ರಕ್ತವಿಲ್ಲದ ಸ್ಥಳದಲ್ಲಿ ಗೋಡೆಯ ಕಣಗಳನ್ನು

ಪೊಲೀಸರು ಕೆರೆದು ಸಂಗ್ರಹಿಸಿದರು. ಶವ ಬಿದ್ದಿದ್ದ ಸ್ಥಳ ಮತ್ತು ಅಡುಗೆ ಕೋಣೆಯ ಮಧ್ಯದಲ್ಲಿ ಒಂದು ನೀಲಿ ಬಣ್ಣದ ಹರಿದಿರುವ ಪ್ಲಾಸ್ಟಿಕ್ ಚೀಲ ಇತ್ತು, ಅದರ ಮೇಲೆ ರಕ್ತದ ಕಲೆಗಳು ಇತ್ತು, ಅದನ್ನು ಸಹ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಶವ ಬಿದ್ದಿದ್ದ ಕೋಣೆಯಲ್ಲಿ ಒಂದು ಅರ್ಧ ತೋಳಿನ ಟೀಶರ್ಟ ಮತ್ತು ಸಿಮೆಂಟ್ ಬಣ್ಣದ ಒಂದು ಬನಿಯನ್ ಇತ್ತು, ಅವುಗಳಿಗೆ ರಕ್ತದ ಕಲೆಗಳಾಗಿದ್ದವು. ಅವುಗಳನ್ನು ಸಹ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಪೊಲೀಸರು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು. ಆ ಬಗ್ಗೆ ಪೊಲೀಸರು ಬೆಳಿಗ್ಗೆ ಸುಮಾರು 9 ಗಂಟೆಯಿಂದ ಮಧ್ಯಾಹ್ನ 12 ರಿಂದ 12.30 ಗಂಟೆಯವರೆಗೆ ಮಹಜರ್ ಬರೆದುಕೊಂಡರು. ಅದಕ್ಕೆ ನಾನು, ಪ್ರಾಸಾ.1 ಮತ್ತು ಪ್ರಾಸಾ.5 ರವರು ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಈಗಾಗಲೇ ನಿಪಿ.3 ರಿಂದ 5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಆರೋಪಿ ಮತ್ತು ಶೇಷಪ್ಪ ವಾಸವಾಗಿದ್ದ ನಮ್ಮ ಕೂಲಿ ಲೈನ್ ಮನೆಯಲ್ಲಿ ಶೇಷಪ್ಪ ಕೊಲೆಯಾಗಿದ್ದ ಸ್ಥಳ, ಆತನ ಶವ ಮತ್ತು ಆತನಿಗೆ ಆದ ಗಾಯಗಳು ಕಂಡುಬರುವುದಾಗಿ

ನುಡಿದಿರುತ್ತಾರೆ. ಅವುಗಳ ಪೈಕಿ ನಿಪಿ.3 ರಲ್ಲಿ ತನ್ನ, ಫ್ರಾಸಾ.1, ಫ್ರಾಸಾ.5 ಮತ್ತು ಪೊಲೀಸರ ಇರುವಿಕೆ ಇರುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ಈಗಾಗಲೇ ನಿಪಿ.16 ಮತ್ತು ಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋಗಳಲ್ಲಿ ಕಂಡುಬರುವುದು ತಮ್ಮ ಎಸ್ಟೇಟಿನ ಕೂಲಿ ಲೈನ್ ಮನೆ ಎಂದು, ಅದರಲ್ಲಿಯೇ ಆರೋಪಿ ಮತ್ತು ಶೇಷಪ್ಪ ಒಟ್ಟಿಗೆ ವಾಸವಾಗಿದ್ದಾಗಿ ನುಡಿದಿರುತ್ತಾರೆ.

12. ಮೇಲೆ ಹೇಳಿದಂತೆ ಮಹಜರ್ ಸಮಯದಲ್ಲಿ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗಾಗಲೇ ಮು.ಮಾ.1 ರಿಂದ 7 ಎಂದು ಗುರುತಿಸಲ್ಪಟ್ಟಿರುವ ರಕ್ತ, ಗೋಡೆಯ ಮಾದರಿ ಕಣಗಳು, ಪ್ಲಾಸ್ಟಿಕ್ ಚೀಲ, ಬನಿಯನ್, ಗೋಡೆಯ ರಕ್ತಮಿಶ್ರಿತ ಕಣಗಳು, ಹತ್ತಿಯಲ್ಲಿ ಶೇಖರಿಸಿದ ರಕ್ತ ಮತ್ತು ಟೀಶರ್ಟನ್ನು ನೋಡಿ ಗುರುತಿಸಿ ಆ ದಿನ ಪೊಲೀಸರು ಮಹಜರ್ ಸಮಯದಲ್ಲಿ ತಮ್ಮ ವಶಕ್ಕೆ ತೆಗೆದುಕೊಂಡ ವಸ್ತುಗಳು ಅವೇ ಎಂದು ನುಡಿದಿರುತ್ತಾರೆ. ಮೇಲೆ ಹೇಳಿದಂತೆ ಮಹಜರ್ ಜರುಗಿಸಿದ 2 ದಿನಗಳೊಳಗೆ ಪೊಲೀಸರು ಆರೋಪಿಯನ್ನು ನಮ್ಮ ಎಸ್ಟೇಟಿಗೆ ಕರೆದುಕೊಂಡು ಬಂದು ಮಹಜರ್ ಕ್ರಮ ಜರುಗಿಸಿದರು.

13. ದಿಃ 20-11-2021 ರಂದು ಪೊಲೀಸರು ನನ್ನನ್ನು ತಮ್ಮ ಠಾಣೆಗೆ ಕರೆಸಿ ವಿಚಾರಿಸಿದರು. ಆಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟೆನು. ಅದೇ ದಿನ ನಮ್ಮ

ಎಸ್ಟೇಟಿನ ಕೂಲಿ ಕೆಲಸಗಾರಿಗೆ ನಿರ್ವಹಿಸುವ ಹಾಜರಾತಿ ವಹಿಯ 2021 ನೇ ಇಸವಿ ನವೆಂಬರ್ ತಿಂಗಳಿನ ಪ್ರತಿಯನ್ನು ನನ್ನ ತಂದೆಯ ಪರವಾಗಿ ನಾನು ದೃಢೀಕರಿಸಿ ಪೊಲೀಸರಿಗೆ ಕೊಟ್ಟೆನು. ಹಾಜರಾತಿ ವಹಿಯ ಸದರಿ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.22 ಎಂದು ಗುರುತಿಸಲಾಯಿತು. ಅದರಲ್ಲಿ ಮೃತ ಶೇಷಪ್ಪ ಅಲಿಯಾಸ್ ಶಶಿಕುಮಾರ ಅಲಿಯಾಸ್ ಶಶಿ ಮತ್ತು ಆರೋಪಿಯ ಹೆಸರು ನಮೂದಾಗಿರುವುದು ಕಂಡುಬರುತ್ತದೆ.

14. ದಿಃ 29-01-2022 ರಂದು ಪೊಲೀಸರು ನನ್ನನ್ನು ಚಿಕ್ಕಮಗಳೂರಿನ ನ್ಯಾಯಾಧೀಶರ ಬಳಿ ಹಾಜರುಪಡಿಸಿದ್ದರು. ಸದರಿ ನ್ಯಾಯಾಧೀಶರು ನನ್ನನ್ನು ವಿಚಾರಿಸಿದಾಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟೆನು.

15. 2022 ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಒಂದು ದಿನ ಚಿಕ್ಕಮಗಳೂರಿನ ಡಿ.ವೈ.ಎಸ್.ಪಿ. ರವರು ತಮ್ಮ ಕಛೇರಿಗೆ ನನ್ನನ್ನು ಕರೆಸಿ ವಿಚಾರಿಸಿದರು. ತನಿಖಾ ಸಮಯದಲ್ಲಿ ಮೃತ ಶೇಷಪ್ಪ ಪರಿಶಿಷ್ಟ ಜಾತಿಗೆ ಸೇರಿದವರೆಂದು, ಆರೋಪಿ ಉಪ್ಪಾರ ಜಾತಿಗೆ ಸೇರಿದವನೆಂದು ಕಂಡುಬಂದಿದ್ದಾಗಿ ಪೊಲೀಸರು ನನಗೆ ತಿಳಿಸಿದರು. ಆ ದಿನ ನಾನು ಡಿ.ವೈ.ಎಸ್.ಪಿ. ರವರಿಗೆ ಹೇಳಿಕೆ ಕೊಟ್ಟೆನು. ಅಡುಗೆ ವಿಚಾರದಲ್ಲಿ ಗಲಾಟೆಯಾಗಿ ಆರೋಪಿ ಶೇಷಪ್ಪನನ್ನು ಕೊಲೆ ಮಾಡಿದ್ದಾಗಿ ತಿಳಿಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ-</u>

16. ಪ್ರತಿ ಬುಧವಾರದಂದು ನಿಮ್ಮ ಎಸ್ಟೇಟಿನಲ್ಲಿ ಕೂಲಿ ಕಾರ್ಮಿಕರಿಗೆ ಬಟವಾಡೆ ಮಾಡಲಾಗುತ್ತದೆ ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇದೆಯೇ ಎಂದರೆ ಸಾಕ್ಷಿ ನಾನು ಹಾಜರುಪಡಿಸಿರುವ ಹಾಜರಾತಿ ವಹಿಯಲ್ಲಿ ಬುಧವಾರದಂದು ರಜೆ ತೋರಿಸಲಾಗಿದೆ ಎನ್ನುತ್ತಾರೆ. ಎಲ್ಲಾ ಎಸ್ಟೇಟುಗಳಲ್ಲಿ ಹಾಜರಾತಿ ವಹಿಯನ್ನು ನಿರ್ವಹಿಸಲಾಗುತ್ತದೆ ಎಂದರೆ ಸರಿ. ನಿಮ್ಮದು ಕಬ್ಬಿನಹಳ್ಳಿ ಎಸ್ಟೇಟ್ ಎಂದರೆ ಸರಿ. ನಿಮ್ಮ ಎಸ್ಟೇಟಿನ ಹಾಜರಾತಿ ವಹಿಯನ್ನು ಕಾರ್ಮಿಕ ಇಲಾಖೆಗೆ ಸಲ್ಲಿಸಬೇಕಾಗುತ್ತದೆ ಎಂದರೆ ಸಾಕ್ಷಿ ಖಾಯಂ ಕೆಲಸಗಾರರು ಇದ್ದ ಪಕ್ಷದಲ್ಲಿ ಮಾತ್ರ ಸಲ್ಲಿಸಬೇಕಾಗುತ್ತದೆ, ಆದರೆ ನಮ್ಮ ಎಸ್ಟೇಟಿನಲ್ಲಿ ಇರುವವರೆಲ್ಲರೂ ತಾತ್ಕಾಲಿಕ ಕೆಲಸಗಾರರು ಎನ್ನುತ್ತಾರೆ.

17. ನಿಪಿ.22 ದಾಖಲೆ ನಿಮ್ಮ ಬರವಣಿಗೆಯಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಚಾಸಾ.16 ರವರು ನಿರ್ವಹಿಸುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯ ಪ್ರಕಾರ ನಿಮ್ಮ ಎಸ್ಟೇಟಿನಲ್ಲಿ 31 ಜನ ಕೂಲಿ ಕಾರ್ಮಿಕರು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ಸೀಜನ್ ನಲ್ಲಿ ಹೆಚ್ಚು ಕೆಲಸಗಾರರು ಇರುತ್ತಾರೆ ಎನ್ನುತ್ತಾರೆ.

18. ಸಾಮಾನ್ಯವಾಗಿ ಅಕ್ಟೋಬರ್ ಕೊನೆಯ ವಾರದಿಂದ ಮಾರ್ಚ್ ಕೊನೆಯ ವಾರದವರೆಗೆ ಕಾಫಿ ಕೊಯ್ಯುಲು

ಮಾಡಲಾಗುತ್ತದೆ ಎಂದರೆ ಸಾಕ್ಷಿ ನಮ್ಮದು ಅರೇಬಿಕಾ ಕಾಫಿ ಎಸ್ಟೇಟ್, ಹಾಗಾಗಿ ಅದು ಹಣ್ಣು ಆಗುವುದು ತಡವಾಗುತ್ತದೆ, ನವೆಂಬರ್ ಮೊದಲ ವಾರದಿಂದ ಪ್ರಾರಂಭವಾಗಿ ಜನವರಿ ಅಥವಾ ಫೆಬ್ರವಾರಿಗೆ ಸೀಜನ್ ಮುಗಿಯುತ್ತದೆ ಎನ್ನುತ್ತಾರೆ. ನಮ್ಮ ಎಸ್ಟೇಟಿನಲ್ಲಿ ಒಟ್ಟು 10 ಕೂಲಿ ಲೈನ್ ಮನೆಗಳಿವೆ. ಅಲ್ಲಿ ದನದ ಕೊಟ್ಟಿಗೆಗಳು ಇವೆ ಎಂದರೆ ಸಾಕ್ಷಿ ನಮ್ಮ ಮನೆಯ ಬಳಿ ಇವೆ, ಕೂಲಿ ಲೈನ್ ಬಳಿ ಇಲ್ಲ ಎನ್ನುತ್ತಾರೆ. ನಿಮ್ಮ ಎಸ್ಟೇಟಿನಲ್ಲಿ ಸಿಸಿ ಕ್ಯಾಮೆರವನ್ನು ಅಳವಡಿಸಿದ್ದೀರಿ ಎಂದರೆ ಸಾಕ್ಷಿ ಘಟನಾ ಸಮಯದಲ್ಲಿ ಇರಲಿಲ್ಲ, ಈಗ ಅಳವಡಿಸಿದ್ದೇವೆ ಎನ್ನುತ್ತಾರೆ.

19. ನಿಪಿ.22 ಎಸ್ಟೇಟ್ ಪ್ರಿಂಟೆಡ್ ಫಾರ್ಮ್ಯಟ್‌ನಲ್ಲಿ ಇಲ್ಲ ಎಂದರೆ ಸಾಕ್ಷಿ ಅಂಗಡಿಯಲ್ಲಿ ದೊರೆಯುವ ರಿಜಿಸ್ಟರ್ ನ್ನು ಖರೀದಿಸಿ ನಾವು ನಿರ್ವಹಿಸುತ್ತೇವೆ ಎನ್ನುತ್ತಾರೆ. ನಿಪಿ.22 ರಲ್ಲಿ ಕಂಡುಬರುವಂತಹ ಬರವಣಿಗೆಯನ್ನು ಯಾವಾಗ ಬೇಕಾದರೂ ಮಾಡಬಹುದು ಎಂದರೆ ಸಾಕ್ಷಿ ಕಳೆದ 6 ವರ್ಷಗಳಿಂದ ನಿರ್ವಹಿಸಿದ ಹಾಜರಾತಿ ಪುಸ್ತಕಗಳು ನಮ್ಮ ಬಳಿ ಇವೆ, ಬೇಕಾದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಬುಧವಾರ ರಜೆ ದಿನ ಎಂದು ಹೇಳಿದ್ದೀರಿ ಆದರೆ ಆ ಬಗ್ಗೆ ನಿಪಿ.22 ರಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಬರೆದಿಲ್ಲ ಆದರೆ ಅದರಲ್ಲಿ ಖಾಲಿ ಇರುವುದು ಬುಧವಾರದಂದು, ಅದರ ಅರ್ಥ ಆ ದಿನ ರಜೆ ಎಂದು ಎನ್ನುತ್ತಾರೆ.

20. ನಿಪಿ.22 ರಲ್ಲಿ ಕೂಲಿ ಕೆಲಸಗಾರರ ಸಹಿ ಕಂಡುಬರುವುದಿಲ್ಲ ಎಂದರೆ ಸಾಕ್ಷಿ ನಾವು ಯಾವುದೇ

ಕೆಲಸಗಾರರ ಸಹಿಯನ್ನು ಪಡೆಯುವುದಿಲ್ಲ, ಕೇವಲ ಅವರ ಹಾಜರಾತಿಯ ಬಗ್ಗೆ ರೈಟರ್ ನಮೂದು ಮಾಡುತ್ತಾರೆ ಎನ್ನುತ್ತಾರೆ. ನಿಪಿ.22 ದಾಖಲೆಯನ್ನು ನೀವು ಈ ಪ್ರಕರಣಕ್ಕಾಗಿ ಸೃಷ್ಟಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ನ್ಯಾಯಾಧೀಶರಿಗೆ ನೀಡಿದ್ದೀರಿ ಎನ್ನಲಾದ ಹೇಳಿಕೆಯಲ್ಲಿ ಸದರಿ ದಾಖಲೆಯನ್ನು ಪೊಲೀಸರಿಗೆ ಕೊಟ್ಟ ಬಗ್ಗೆ ತಿಳಿಸಿಲ್ಲ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

21. ಆರೋಪಿ ಹಿಂದೆ ನಿಮ್ಮ ಎಸ್ಟೇಟಿನಲ್ಲಿ ಕೆಲಸಕ್ಕೆ ಇದ್ದನು ಎಂದರೆ ಸಾಕ್ಷಿ ಘಟನೆಯ ಸುಮಾರು 3 ರಿಂದ 4 ವರ್ಷಗಳ ಹಿಂದೆ ಒಮ್ಮೆ ನಮ್ಮ ಎಸ್ಟೇಟಿಗೆ ಸೀಜನ್ ಟೈಮಿನಲ್ಲಿ ಬಂದು ಕೆಲಸ ಮಾಡಿದ್ದನು ಎನ್ನುತ್ತಾರೆ. ನಾನು ಪದವೀಧರ.

22. ಶವವನ್ನು ಸ್ಥಳದಿಂದ ಸಾಗಿಸಿದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ, ರಾತ್ರಿ 8.30 ಗಂಟೆಯಿಂದ 9 ಗಂಟೆಯಾಗಿರಬಹುದು ಎನ್ನುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದು ನಿಮ್ಮನ್ನು ವಿಚಾರಿಸಿ ಬರವಣಿಗೆ ಮಾಡಿಕೊಂಡಿದ್ದರು ಮತ್ತು ನಿಮ್ಮ ಸಹಿಯನ್ನು ಪಡೆದುಕೊಂಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿ. ಸಾಕ್ಷಿಗೆ ನಿಪಿ.2 ದಾಖಲೆಯಲ್ಲಿರುವ ಕೇವಲ ಸಹಿಯನ್ನು ತೋರಿಸಿ ನೀವು ಆ ಸಮಯದಲ್ಲಿ ಮಾಡಿದ ಸಹಿ ಅದೇ ಎಂದು ಕೇಳಲಾಗಿ ಸಾಕ್ಷಿ ಸಹಿ ನನ್ನದೇ ಆದರೆ ದಾಖಲೆ ಯಾವುದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.3 ರಿಂದ ಪಿ.5 ಫೋಟೋಗಳನ್ನು ಆ ಸಮಯದಲ್ಲಿ ತೆಗೆಯಲಾಗಿದೆ ಎಂದರೆ

ಸರಿ. ಸದರಿ ಫೋಟೋಗಳನ್ನು ತೆಗೆದ ಅರ್ಧ ಗಂಟೆಯೊಳಗೆ ಶವವನ್ನು ಅಲ್ಲಿಂದ ಸಾಗಿಸಲಾಯಿತು ಎಂದರೆ ಸರಿ. ಶವವನ್ನು ಸ್ಥಳದಿಂದ ಸಾಗಿಸಿದ ಬಳಿಕ ನಾನು ಪುನಃ ಅದನ್ನು ನೋಡಿಲ್ಲ. ಮಹಜರ್ ನ್ನು ನೀವು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಪೊಲೀಸರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ, ಅದನ್ನು ಬರೆದಿದ್ದಾರೆ ಎನ್ನುತ್ತಾರೆ.

23. ಸರ್ವೆ ನಂಬರು 212/2 ರಲ್ಲಿ 2 ಎಕರೆ ಜಮೀನು ಇರುವುದಾಗಿ ನೀವು ಪೊಲೀಸರಿಗೆ ನೀಡಿದ್ದೀರಿ ಎನ್ನಲಾದ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ನನಗೆ ಒಂದೊಂದು ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಸರಿಯಾಗಿ ನೆನಪಿಲ್ಲ, ಹಾಗಾಗಿ ಹೇಳದೇ ಇರಬಹುದು ಎನ್ನುತ್ತಾರೆ.

24. ಶೇಷಪ್ಪನ ಸಾವು ದಿಃ 18-11-2021 ರಂದು ಬೆಳಗಿನ ಜಾವ 4 ಗಂಟೆ ಸುಮಾರಿಗೆ ನಿಮ್ಮ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ಸಂಭವಿಸಿದೆ ಎಂದರೆ ನನಗೆ ಗೊತ್ತಿಲ್ಲ. ನೀವು ಹೇಳಿದಂತೆ ದಿಃ 19-11-2021 ರಂದು ಪೊಲೀಸರು ಸ್ಥಳದಲ್ಲಿ ಮಹಜರ್ ಜರುಗಿಸಿ ಮು.ಮಾ.1 ರಿಂದ 7 ನ್ನು ಅಮಾನತುಪಡಿಸಿಕೊಂಡ ಬಗ್ಗೆ ನೀವು ನ್ಯಾಯಾಧೀಶರಿಗೆ ನೀಡಿದ್ದೀರಿ ಎನ್ನಲಾದ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ.

25. ಆರೋಪಿ ಹಿಂದೆ ನಿಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡಿದ್ದ ಸಮಯದಲ್ಲಿ ನೀವು ಆತನಿಗೆ ಸರಿಯಾದ

ಸಂಬಳ ಮತ್ತು ಕೊಡಬೇಕಾದ ಸವಲತ್ತುಗಳನ್ನು ಕೊಡದ ಕಾರಣ ನಿಮ್ಮ ಮತ್ತು ಆತನ ನಡುವೆ ವಿವಾದ ಇತ್ತು ಎಂದರೆ ಸರಿಯಲ್ಲ.

26. ನೀವು ಪೊಲೀಸರಿಗೆ ಮತ್ತು ನ್ಯಾಯಾಧೀಶರಿಗೆ ನೀಡಿದ್ದೀರಿ ಎನ್ನಲಾದ ಹೇಳಿಕೆಗಳಲ್ಲಿ ನಿಮ್ಮ ಮನೆಯ ಮೇಲ್ಭಾಗದಲ್ಲಿ 4 ರಿಂದ 5 ಕೂಲಿ ಲೈನ್ ಮನೆಗಳು ಮತ್ತು ಕೆಳಭಾಗದಲ್ಲಿ 3 ಕೂಲಿ ಲೈನ್ ಮನೆಗಳು ಇರುವ ವಿಚಾರವನ್ನು ತಿಳಿಸಿಲ್ಲ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನಿಮ್ಮ ಮನೆಯ ಕೆಳಭಾಗದಲ್ಲಿರುವ ಮೊದಲನೆ ಕೂಲಿ ಲೈನ್ ಮನೆಯನ್ನು ಆರೋಪಿ ಮತ್ತು ಮೃತನಿಗೆ ಉಳಿಯಲು ಕೊಟ್ಟಿದ್ದ ಬಗ್ಗೆ ಸದರಿ ಹೇಳಿಕೆಗಳಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎನ್ನುತ್ತಾರೆ.

27. ನೀವು ಮೃತನ ತಂದೆಯ ಮೊಬೈಲ್ ನಂಬರನ್ನು ಪೊಲೀಸರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಪೊಲೀಸರೇ ಅದನ್ನು ತೆಗೆದು ನನಗೆ ಕೊಟ್ಟಿದ್ದರು ಎನ್ನುತ್ತಾರೆ. ಮೃತನ ತಂದೆ ಆಗಾಗ್ಗೆ ನಿಮ್ಮ ಎಸ್ಟೇಟಿಗೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ ನಿಮಗೆ ಅವರ ಪರಿಚಯವಿತ್ತು ಎಂದರೆ ಸರಿಯಲ್ಲ.

28. ದಿಃ 18-11-2021 ರ ಬೆಳಿಗೆಯೇ ನಿಮಗೆ ಶೇಷಪ್ಪನ ಸಾವಾಗಿರುವುದು ಗೊತ್ತಿದ್ದರೂ ಸಹ ಅದನ್ನು ನೀವು ಮುಚ್ಚಿಟ್ಟಿದ್ದೀರಿ ಎಂದರೆ ಸರಿಯಲ್ಲ. ಚಾಸಾ.16 ರವರು ಆರೋಪಿ ಮತ್ತು ಶೇಷಪ್ಪ ಗಲಾಟೆ ಮಾಡಿಕೊಳ್ಳುತ್ತಿದ್ದನ್ನು ನೋಡಿ ನಿಮಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಆ

ಸಮಯದಲ್ಲಿ ಆರೋಪಿ ನಿಮ್ಮ ಎಸ್ಟೇಟಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

29. ನಿಮ್ಮ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಜರುಗಿಸಿದ್ದಾಗಿ ಹೇಳಿದ್ದೀರಿ ಅದರಲ್ಲಿ ಪೊಲೀಸರು ಏನಾದರೂ ತಿದ್ದುಪಡಿ ಮಾಡಿದರೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಸಮಕ್ಷಮ ಫ್ರಾಸಾ.1 ಮತ್ತು ಫ್ರಾಸಾ.5 ರವರು ಸಹಿ ಮಾಡಿದ್ದಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರಾದರೂ ಸಹಿ ಮಾಡಿದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ.

30. ಪೊಲೀಸರು ನಮ್ಮ ಸಮಕ್ಷಮ ವಸ್ತುಗಳನ್ನು ಸೀಲ್ ಮಾಡಿಕೊಂಡರು. ಸದರಿ ಸೀಲ್ ನ್ನು ನಿಮ್ಮ ಪರಿಶೀಲನೆಗಾಗಿ ಪೊಲೀಸರು ನಿಮಗೆ ಕೊಟ್ಟರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವ ಅಕ್ಷರದಿಂದ ಸೀಲ್ ಮಾಡಲಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಮು.ಮಾ.1 ರಿಂದ 7 ನ್ನು ಗುರುತಿಸಲು ನೀವು ವಿಶೇಷವಾದ ಗುರುತುಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅವುಗಳನ್ನು ನಿಮ್ಮ ಸಮಕ್ಷಮ ಅಮಾನತುಪಡಿಸಿಕೊಂಡ ಬಗ್ಗೆ ಅವುಗಳ ಮೇಲೆ ನಿಮ್ಮ ಸಹಿಯನ್ನು ಪಡೆಯಲಾಯಿತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ನಿಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

31. ನೀವು ಆರೋಪಿಗೆ ಕೊಡಬೇಕಾದ ಸವಲತ್ತುಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ನೀವು ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅಜ್ಜನ ಕಾಲದಿಂದಲೂ ನೀವು ಕಾಫಿ ಬೆಳೆಗಾರರಾಗಿದ್ದೀರಿ ಎಂದರೆ ಸರಿ.

32. ಕಾಫಿ ಎಸ್ಟೇಟಿಗೆ ಖಾಯಂ ಕೆಲಸಗಾರರನ್ನೇ ನೇಮಿಸಿಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ಮೊದಲಿಗೆ ಖಾಯಂ ಕೆಲಸಗಾರರು ಸಿಗುತ್ತಿದ್ದರು, ಈಗ ಯಾರು ಬರುವುದಿಲ್ಲ ಎನ್ನುತ್ತಾರೆ. ನಿಮ್ಮಲ್ಲಿ ಇರುವ ಕೂಲಿ ಕೆಲಸಗಾರರೆಲ್ಲರೂ ಖಾಯಂ ಕೆಲಸಗಾರರು ಆಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಪೊಲೀಸರಿಗೆ ಮತ್ತು ನ್ಯಾಯಾಧೀಶರಿಗೆ ನೀಡಿದ್ದೀರಿ ಎನ್ನಲಾದ ಹೇಳಿಕೆಗಳಲ್ಲಿ ನಿಮ್ಮಲ್ಲಿದ್ದ ಕೆಲಸಗಾರರೆಲ್ಲರೂ ತಾತ್ಕಾಲಿಕ ಕೆಲಸಗಾರರು ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ